ಬರವಣಿಗೆಯಲ್ಲಿ ಕಾಲ ಕಳೆಯುತ್ತಿದ್ದ. ಇಂಗ್ಲಿಷ್ ಮತ್ತು ಕನ್ನಡ ಎರಡರಲ್ಲೂ ಎರಡೆರಡು ಕಾದಂಬರಿಗಳನ್ನು ಬರೆದು ಮುಗಿಸಿ ಪ್ರಕಾಶಕರಿಗಾಗಿ ಕಾಯುತ್ತಿದ್ದ. ಹಾಗೆಂದು ಬರೆಯುವುದನ್ನು ನಿಲ್ಲಿಸಲಿಲ್ಲ. ಇನ್ನೂ ಬರೆಯುತ್ತಲೇ ಇದ್ದಾನೆ. ಹಾಗಾಗಿಯೇ ಈ ಅಣ್ಣ ಮತ್ತು ಅಪ್ಪನ ಒತ್ತಾಯಕ್ಕೂ ಮಣಿಯದೆ ಮದುವೆಯನ್ನು ಮುಂದೂಡುತ್ತಲೇ ಬಂದವ 'ಏನಾದರೂ ಒಂದು ಹೆಸರು ಮಾಡಬೇಕು. ಆ ಮೇಲೆಯೇ ಮದುವೆ' ಎನ್ನುತ್ತಿದ್ದಾನೆ.

* * *

ಅಣ್ಣ ಹೇಳಿದ್ದನ್ನು ಕೇಳಿದ ಚಂದ್ರುವಿನ ತಲೆಯಲ್ಲಿ ಹುಳು ಹೊಕ್ಕಿತ್ತು. ಅಪ್ಪ ಆತ್ಮಹತ್ಯೆ ಮಾಡಿಕೊಳ್ಳಲು ಯಾವುದೇ ಕಾರಣ ಕಾಣಿಸಿರಲಿಲ್ಲ. ಎಲ್ಲರನ್ನೂ ವಿಚಾರಿಸ ಹತ್ತಿದ. ಮನೆ ಒಳಗೆ ಹೊರಗೆ ಕೆಲಸ ಮಾಡಲು ಬರುವವರನ್ನು. ತೋಟದ ಆಳುಗಳನ್ನು. ತೋಟದ ಮೇಸ್ತ್ರಿಯನ್ನು. ಹೀಗೆ ಸಿಕ್ಕಿದವರನ್ನೆಲ್ಲ. ಯಾರೊಡನೆಯೂ ಗುಟ್ಟು ಬಿಟ್ಟು ಕೊಡಲಿಲ್ಲ. ಯಾತಕ್ಕೆ ವಿಚಾರಿಸುತ್ತಿದ್ದೇನೆಂದು ಹೇಳಲಿಲ್ಲ. ಲೋಕಾಭಿರಾಮವಾಗಿ ಮಾತನಾಡುವ ಹಾಗೆ. ಅಪ್ಪನನ್ನು ಕಳೆದುಕೊಂಡ ತನ್ನ ದುಃಖವನ್ನು ಅವರೊಂದಿಗೆ ಹಂಚಿ ಕೊಳ್ಳುವವನ ಹಾಗೆ. ಎಲ್ಲರೂ ಸಹಕರಿಸಿದ್ದರು. `ಸಾಯುವ ವಯಸ್ಸೇ ಅಲ್ಲ. ಆರೋಗ್ಯವೂ ಅಷ್ಟು ಚೆನ್ನಾಗಿತ್ತು. ದಿನವೂ ಬೆಳಿಗ್ಗೆ ಸಾಯಂಕಾಲ ತೋಟವನ್ನು ಸುತ್ತಿ ಕೆಲಸದ ಬಗ್ಗೆ ವಿಚಾರಿಸಿ ಹೋಗುತ್ತಿದ್ದರು. ಸಾಯುವ ಮುನ್ನಾದಿನ ಸಂಜೆಯೂ ತೋಟಕ್ಕೆ ಬಂದಿದ್ದರು. ಎಲ್ಲರೂ ಅದನ್ನೇ ಹೇಳಿದ್ದರು.

ಅಂತಹ ಅಪ್ಪ ಯಾಕೆ ಈ ವಯಸ್ಸಿನಲ್ಲಿ ಈ ಕೆಲಸ ಮಾಡಿಕೊಂಡರು ಬಗೆಹರಿಯದ ಪ್ರಶ್ನೆ ಕಾಡುತ್ತಿತ್ತು. ಅಣ್ಣನ ಬಗ್ಗೆ ಎಲ್ಲಿಲ್ಲದ ನಂಬಿಕೆ ಅವನಿಗೆ. ಅಷ್ಟೇ ಅಭಿಮಾನ. ಅಪ್ಪನನ್ನು ತನ್ನಷ್ಟೇ ಏನು ತನಗಿಂತ ಹೆಚ್ಚು ಪ್ರೀತಿಸುತ್ತಿದ್ದ, ಗೌರವಿಸುತ್ತಿದ್ದ. ಅಂತಹ ಅಣ್ಣನ ಜೊತೆಗಿದ್ದ ಅಪ್ಪ ಯಾಕೆ ಹೀಗೆ ಮಾಡಿಕೊಂಡರು....?

* * *

ಅಪ್ಪ ಸತ್ತ ಐದನೇ ದಿನ. ಬೆಳಿಗ್ಗಿನ ಕಾರ್ಯವಿಧಿಗಳನ್ನೆಲ್ಲ ಮುಗಿಸಿ ಹಾಗೆಯೇ ಸುತ್ತಾಡುತ್ತಿದ್ದ ಚಂದ್ರು. ಮನೆಯ ಸುತ್ತ ತಿರುಗುತ್ತ ಅಲ್ಲಲ್ಲ ಅಪ್ಪ ಬೆಳೆಸಿದ್ದ ಹೂ ಗಿಡಗಳನ್ನು ಸವರುತ್ತ ಅಪ್ಪನೊಂದಿಗೇ ಮಾತನಾಡುತ್ತಿದ್ದೇನೊ ಎನ್ನುವಂತೆ ಅವುಗಳನ್ನು ಮೂಸಿ ಮೂಸಿ ನೋಡುತ್ತಿದ್ದ. ಹಾಗೆಯೇ ಅಡಿಗೆ ಮನೆಯ ಹಿಂದುಗಡೆ ಸೊಂಪಾಗಿ ಬೆಳೆದಿದ್ದ ಬಾಳೆಯ ಗಿಡಗಳನ್ನು ನೋಡುತ್ತ ಹೋಗುತ್ತಿದ್ದಂತೆ ಆ ಗಿಡಗಳ ಸಂದಿಯಲ್ಲಿ ಇಣುಕುತ್ತಿದ್ದ ಬಾಟ್ಲಿಯೊಂದರ ಮೇಲಿನ ಚಿಹ್ನೆ ಅವನ ಗಮನ ಸೆಳೆದಿತ್ತು. ನಿಧಾನವಾಗಿ ಆ ಬಾಟ್ಲಿಯನ್ನು ಎತ್ತಿ ತೆಗೆದುಕೊಂಡು ನೋಡಿದರೆ ಹೊಸತಾಗಿ ಅಂಗಡಿಯಿಂದ ತಂದ ವಿಷ. ಮಲೆನಾಡಿನಲ್ಲಿ ಇಲಿಗಳನ್ನು ಕೊಲ್ಲಲು ಬಳಸುತ್ತಿದ್ದ ಖಡಕ್ ವಿಷ. ಖಾಲಿ ಮಾಡಿ ಅಡುಗೆ ಮನೆಯ ಕಿಟಿಕಿಯಿಂದ ಹೊರಗೆಸೆದಿರಬೇಕು.

ಒಂದಕ್ಕೆ ಒಂದನ್ನು ಸೇರಿಸಿದರೆ ಎರಡಾಗುತ್ತದೆ ಎನ್ನುವುದು ಹೊಳೆಯಲು ಚಂದ್ರುವಿಗೆ ಹೆಚ್ಚು ಹೊತ್ತು ಬೇಕಾಗಿರಲಿಲ್ಲ. ಹಾಗೆಯೇ ಅದರ ಮುಂದಿನದ್ದೂ....

ಹಾಗಾದರೆ ಅಪ್ಪ ತಾನಾಗಿಯೇ ವಿಷ ಸೇವಿಸಿರಲಿಕ್ಕಿಲ್ಲ.. ಅಪ್ಪ ಕುಡಿಯುವ ಹಾಲೋ ಇನ್ನೆಂತದಕ್ಕೋ ಅಡುಗೆ ಮನೆಯಲ್ಲಿಯೇ ವಿಷ ಬೆರೆತಿದೆ. ಅದು ಅವರು ದಿನಾ ಕುಡಿಯುತ್ತಿದ್ದ ಹಾಲೇ ಇದ್ದಿರಬೇಕು. ಅಪ್ಪನಿಗೆ ಹಾಲು ಕೊಡುವ ಕೆಲಸವನ್ನು ಅತ್ತಿಗೆ ಈ ಮನೆಗೆ ಬಂದಂದಿನಿಂದ ತಾನೇ ಮಾಡುತ್ತಿದ್ದುದು. ಅಂದರೆ ಅಪ್ಪನಿಗೆ ಹಾಲಿನಲ್ಲಿ ವಿಷ ಬೆರೆಸಿ ಕೊಟ್ಟದ್ದು ಅತ್ತಿಗೆ! ಆದರೆ ಆ ಅತ್ತಿಗೆಯ ಬಗ್ಗೆ ಅವನಿಗಿದ್ದ ಗೌರವ ಮತ್ತು ನಂಬಿಕೆ ಅವನನ್ನು ಮುಂದೆ ಆಲೋಚಿಸಲು ಬಿಡಲಿಲ್ಲ. ಹಾಗಾದರೆ ಇದು ಹೇಗಾಯ್ತು...?

* * *

ಒಳಗೆ ಬಂದ ಚಂದ್ರು ಮೇಜಿನ ಮುಂದೆ ಕುಳಿತು ಅದೇನೋ ಲೆಕ್ಕ ಪತ್ರ ನೋಡುತ್ತಿದ್ದ ಅಣ್ಣನನ್ನು ಏನೂ ಮಾತನಾಡದೆ ಎಳೆದುಕೊಂಡೇ ತೋಟದೊಳಗೆ ನಡೆದಿದ್ದ. ತಮ್ಮನ ಚರ್ಯೆಗೆ ಆಶ್ಚರ್ಯವಾದರೂ ಏನೂ ಕಾರಣವಿಲ್ಲದೆ ಹಾಗೆ ಮಾಡುವವನಲ್ಲ ಅವನು ಎಂದು ತಿಳಿದಿದ್ದ ಅಣ್ಣನೂ ಹಿಂಬಾಲಿಸಿದ್ದ.

'ಅಣ್ಣ, ಅಪ್ಪ ಅತ್ತಿಗೆಯನ್ನು ಹೇಗೆ ನೋಡಿಕೊಳ್ಳುತ್ತಿದ್ದರು?' ಸುತ್ತ ಮುತ್ತ ಯಾರೂ ಇಲ್ಲ ಎನ್ನುವುದನ್ನು ಖಚಿತ ಪಡಿಸಿಕೊಳ್ಳುತ್ತ ಕೇಳಿದ್ದ. ಅಪ್ಪನ ಸಾವಿನಿಂದಾಗಿ ನಿಂತು ಹೋಗಿದ್ದ ತೋಟದ ಕೆಲಸ ನಾಲ್ಕನೆಯ ದಿನ ತಿರುಗಿ ಪ್ರಾರಂಭವಾಗಿದ್ದುದು ಇನ್ನೂ ಮಂದಗತಿಯಲ್ಲೇ ಸಾಗುತ್ತಿತ್ತು. ಮತ್ತು ಅಲ್ಲೊಬ್ಬ ಇಲ್ಲೊಬ್ಬ ಕೆಲಸಗಾರರಷ್ಟೇ ಇದ್ದರು.

ಆಶ್ಚರ್ಯವಾಗಿತ್ತು ಶಂಕರನಿಗೆ 'ಯಾಕೆ ಚಂದ್ರು.. ಅವಳನ್ನು ಮಗಳಂತೆಯೇ ನೋಡಿಕೊಳ್ಳುತ್ತಿದ್ದರು. ಒಂದು ದಿನವೂ ದನಿಯೇರಿಸಿ ಮಾತನಾಡಿದ್ದೂ ಇಲ್ಲ..'

'ಅಲ್ಲ ಅಣ್ಣ.. ಅಪ್ಪನದ್ದು ಆತ್ಮ ಹತ್ಯೆ ಅಲ್ಲ. ಕೊಲೆ. ಕುಡಿಯುವ ಹಾಲಿನಲ್ಲಿ ವಿಷ ಬೆರೆಸಲಾಗಿತ್ತು. ಅದೂ ಆ ವಿಷದ ಖಾಲಿ ಬಾಟಲಿ ನಮ್ಮ ಅಡಿಗೆ ಮನೆಯ ಹಿಂದುಗಡೆ ಬಿದ್ದಿತ್ತು'.

ವಿಷಯ ಯಾವ ದಿಕ್ಕಿನತ್ತ ಹೋಗುತ್ತಿದೆಯೆಂಬುದು ಅಸ್ಪಷ್ಟವಾಗಿ ಹೊಳೆಯ ತೊಡಗಿದ್ದರೂ ಶಂಕರ ಅವನ ಆಲೋಚನೆಯ ಧಾಟಿಯನ್ನು ಒಪ್ಪಲು ತಯಾರಿರಲಿಲ್ಲ. 'ಏನು ಹೇಳುತ್ತಿದ್ದೀಯ ಚಂದ್ರು.. ನಿನ್ನ ಅತ್ತಿಗೆ ದೇವತೆ ಕಣೋ. ಇಂತಹುದೆಲ್ಲ ಆಕೆಯ ಕನಸಿನಲ್ಲೂ ಬರಲಿಕ್ಕಿಲ್ಲ. ಅದೂ ಮಾವ ಎಂದರೆ ದೇವರೆಂದೇ ಭಾವಿಸಿದವಳು ಅವಳು ಮಾತಾಡುತ್ತ ಆಡುತ್ತ ಗಂಟಲು ಕಟ್ಟಿತ್ತು. 'ಕ್ಷಮಿಸು ಅಣ್ಣ.. ನಿನ್ನ ಮನಸ್ಸು ನೋಯಿಸಿದೆ. ದಯವಿಟ್ಟು ಅತ್ತಿಗೆಗೆ ಮಾತ್ರ ಈ ಬಗ್ಗೆ ಏನೂ ಹೇಳಬೇಡ' ಎಂದು ಗೋರೆಯುವ ದನಿಯಲ್ಲಿ ಹೇಳಿ ಮಾತು ಮುಗಿಸಿದ್ದ ತಮ್ಮ.

ಸಮಸ್ಯೆ ಬಗೆಹರಿದಿರಲಿಲ್ಲ. ಹಾಗೆಂದು ಅಣ್ಣನ ಮಾತನ್ನು ತೆಗೆದು ಹಾಕಲೂ ಸಾಧ್ಯವಿಲ್ಲವಲ್ಲ. ಸಂದಿಗ್ದದಲ್ಲಿ ಬಿದ್ದಿದ್ದ. ಆದರೆ ಅಪ್ಪನ ಸಾವಂತೂ ನಿಸ್ಸಂಶಯವಾಗಿ ಕೊಲೆಯೇ...

ಅಡುಗೆಯ ರಾಮಕ್ಕನನ್ನು ವಿಚಾರಿಸಿದರೆ ಎಂದೂ ಇಲ್ಲದ್ದು ಅತ್ತಿಗೆ ಆಕೆಯನ್ನು ಆ ದಿನ ಸಾಯಂಕಾಲವೇ ಪಕ್ಕದೂರಿನಲ್ಲಿದ್ದ ಅವಳ ಮಗಳ ಮನೆಗೆ ಕಳುಹಿಸಿದ್ದರಂತೆ. ಅಲ್ಲ ಅಯ್ಯ.. ಎಂದೋ ಒಮ್ಮೆ ಅಮ್ಮನ ಹತ್ತಿರ ಹೇಳಿದ್ದೆ. ಮಗಳನ್ನು ನೋಡದೆ ತುಂಬ ದಿನಗಳಾದುವು. ನೀವು ಒಪ್ಪಿಗೆ ಕೊಟ್ಟರೆ ಸಂಜೆ ಹೋಗಿ ಮಾರನೆಯ ದಿನ ಅಡುಗೆ ಹೊತ್ತಿಗೆ ಬಂದು ಬಿಡುತ್ತೇನೆ ಎಂದು. ಆಗ `ನೋಡೋಣ ಎಂದವರು ಮೊನ್ನೆ ಅವರೇ ನೆನಪು ಮಾಡಿಕೊಂಡು 'ರಾಮಕ್ಕ ಮಗಳ ಮನೆಗೆ ಹೋಗಬೇಕು ಎನ್ನುತ್ತಿದ್ದೀಯಲ್ಲ. ಇವತ್ತು ಹೋಗು. ಸಂಜೆಯ ಕೆಲಸವನ್ನೆಲ್ಲ ನಾನೇ ಮಾಡಿಕೊಳ್ಳುತ್ತೇನೆ. ನಾಳೆ ಮಾತ್ರ ಬೇಗ ಬಾ ತುಂಬ ಕೆಲಸವಿರುತ್ತದೆ' ಎಂದು ನನ್ನನ್ನು ಕಳುಹಿಸಿದ್ದರು ಎಂದಿದ್ದಳು.

ಚಂದ್ರುವಿನ ಅನುಮಾನ ಪ್ರಬಲವಾಗುತ್ತಿತ್ತು. ಅದಕ್ಕೆ ಸರಿಯಾಗಿ ತೋಟದ ಮೇಸ್ತ್ರಿ ಸಂಜೀವನೂ ಯಾವುದೋ ಮಾತನಾಡುತ್ತ ಒಂದೆಂಟು ದಿನಗಳ ಹಿಂದೆ ಆಕೆ 'ಮನೆಯಲ್ಲಿ ಇಲಿಗಳ ಕಾಟ ಜಾಸ್ತಿಯಾಗಿದೆ ಯಾವುದಾದರೂ ಸ್ಟ್ರಾಂಗ್ ಔಷಧಿಯನ್ನು ತಂದು ಕೊಡು' ಎಂದು ಹೇಳಿ ತನ್ನಿಂದ ವಿಷ ತರಿಸಿಕೊಂಡದ್ದನ್ನೂ ಹೇಳಿದ್ದ. ಅವ ಹೇಳಿದ್ದ ಹೆಸರೂ ಚಂದ್ರುವಿಗೆ ಅಡುಗೆ ಮನೆಯ ಹಿಂದೆ ಸಿಕ್ಕ ಬಾಟಲಿಯ ಮೇಲಿನ ಹೆಸರೂ ಒಂದೇ. ಆದರೂ ಅತ್ತಿಗೆಯನ್ನು ಕೊಲೆಗಡುಕಳ ಸ್ಥಾನದಲ್ಲಿ ನಿಲ್ಲಿಸಲು ಮನಸ್ಸು ಒಪ್ಪುತ್ತಿರಲಿಲ್ಲ.

* * *

ಅಪ್ಪನ ಹದಿನಾಲ್ಕರ ಕಾರ್ಯಕ್ರಮವನ್ನೆಲ್ಲ ಮುಗಿಸಿ ಚಂದ್ರು ಇನ್ನೇನು ಬೆಂಗಳೂರಿಗೆ ತಿರುಗಿ ಹೊರಡುವವನಿದ್ದ. ಶಂಕರ ಹೇಳಿದ್ದ 'ಅಲ್ಲ ಚಂದ್ರು. ಅಪ್ಪನೂ ಇಲ್ಲ. ಇಷ್ಟು ದೊಡ್ಡ ವ್ಯವಸ್ಥೆಯನ್ನು ನಾನು ಹೇಗೆ ನೋಡಿ ಕೊಳ್ಳಲೋ. ನೀನೂ ಬಂದು ಬಿಡು, ಒಟ್ಟಿಗೇ ಇದ್ದು ಬಿಡೋಣ' ಎಂದಿದ್ದ. 'ಆಯ್ತು. ಇದೊಂದು ಬಾರಿ ಹೋಗುತ್ತೇನೆ. ಅಲ್ಲಿಯದೆಲ್ಲ ಮುಗಿಸಿ ಕೂಡಲೇ ಬಂದು ಬಿಡುತ್ತೇನೆ' ಎಂದವ ತುಸು ಅನುಮಾನಿಸುತ್ತ 'ಅಣ್ಣ ನೀನು ಏನೂ ತಪ್ಪು ತಿಳಿಯುವುದಿಲ್ಲ ಎಂದರೆ ಒಂದು ಮಾತು' ಎಂದಿದ್ದ.

'ಇದೇನು ಹೊಸತು ಚಂದ್ರು. ನಾನೆಂದು ನಿನ್ನ ಮಾತನ್ನು ತಪ್ಪು ತಿಳಿದಿದ್ದೇನೆ ಹೇಳು..'

'ಅಲ್ಲ ಅಣ್ಣ ನನಗೇನೋ ಈ ಕೆಲಸ ಅತ್ತಿಗೆಯದ್ದೇ ಅನ್ನಿಸುತ್ತಿದೆ. ಬಲವಾದ ಯಾವುದೋ ಕಾರಣವಿಲ್ಲದೆ ಅವರು ಇದನ್ನು ಮಾಡಿರಲಾರರು. ಯಾವುದಕ್ಕೂ ಅವರನ್ನೇ ನೇರವಾಗಿ ಕೇಳಬಾರದು ಯಾಕೆ' ಎಂದು ಈ ಎಲ್ಲ ದಿನಗಳಲ್ಲಿ ತನಗೆ ತಿಳಿದು ಬಂದ ವಿಚಾರಗಳನ್ನೆಲ್ಲ ಹೇಳಿದ್ದ.

ಹೇಗೂ ಎಲ್ಲ ಮುಗಿದಿದೆ. ಇನ್ನು ಒಂದು ವೇಳೆ ಸತ್ಯ ಹೊರ ಬಂದರೂ ಕೇಸೇನೂ ಆಗಲಾರದು. ಏನಿದ್ದರೂ ವಿಷಯ ನಮ್ಮ ಮೂವರೊಳಗೇ ಉಳಿಯುವಂತೆ ನೋಡಿಕೊಂಡರಾಯಿತು. ಅಷ್ಟಕ್ಕೂ ಪ್ರಮೀಳೆಯೇ ಇಂತಹದೊಂದು ಕೆಲಸ ಮಾಡಿದ್ದು ಹೌದೆಂದಾದರೆ ಅವಳನ್ನು ತವರಿಗೆ ಕಳುಹಿಸುವುದು. ಇಷ್ಟೆಲ್ಲ ಆದ ಮೇಲೆ ಅವಳೊಂದಿಗೆ ಬದುಕುವ ಮಾತಿದೆಯೇ... ಆದರೂ ಮನಸ್ಸು ಒಳಗೇ ಅಳುತ್ತಿತ್ತು. `ಪ್ರಮೀಳೆಯನ್ನು ಬಿಟ್ಟು ಬದುಕಲು